SRI H. D. DEVEGOWDA (The Minister for Public Works and Irrigation.—

a) It was not included in the budget of 1985-86 Though included in the budget of 1986-87, The estimate is yet to be sanction.

b) 1600 Hectares of Kanasageri, Benchinmaradi, Urbanahatti Shegehole, Gaddihole, Dasarahatti, Akkathangerahala, Dombaraurabanahatti and Eranahatti villages.

c) Action will be taken after ganction to the estimate.

Regarding Kundargi Lift Irrigation Scheme

704. SRI M. L. MUTHANNAVAR.—Will the Minister for pubilc works Command Area Development and Irrigation be plesd to State ?

a) When the Kundargi Lift Irrigation will be started ? and what is its cost ?

b) What is the irrigable area of this scheme ? and which are the villages to be supplied with water ?

SRI H. D DEVEGOWDA (The Minister for Public Works and Irrigation·—

a) Under consideration, The cost of Project is about Rs. 6.06 lakhs.

b) 115 Hectares.

Gokak Taluk : Kundargi Village

Hukkeri Taluk : Yellapura and Karaguppe Villages.

ಗಂಗಾ ಕಲ್ಯಾಣ ಯೋಜನೆಯಲ್ಲಿ ಗೋಕಾಕ್ ತಾಲ್ಲೂಕಿನ ಜಮನಾಳ್ ಗ್ರಾಮವನ್ನು ಸೇರಿಸುವ ಬಗ್ಗೆ.

೭೦೫. ಶ್ರೀ ಎಂ. ಎಲ್. ಮುತ್ತಣ್ಣನವರ್ (ಗೋಕಾಕ್).— ಮಾನ್ಯ ಲೋಕೋಪಯೋಗಿ, ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಮಂತ್ರಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗೋಕಾಕ್ ತಾಲ್ಲೂಕಿನ ಜಮನಾಳ ಗ್ರಾಮದಲ್ಲಿ ಗಂಗಾಕಲ್ಯಾಣ ಯೋಜನೆಯನ್ನು ಕಾರ್ಯರೂಪಕ್ಕೆ ತರದಿರಲು ಕಾರಣಗಳೇನು ?

ಆ) ಈ ವರ್ಷ ಈ ಯೋಜನೆಯನ್ನು ಆರಂಭಿಸಲಾಗುವುದೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮಂತ್ರಿ ಮತ್ತು ನೀರಾವರಿ ಮಂತ್ರಿಗಳು).—

ಅ) ಇನ್ನೂ ಅನ್ವೇಷಣೆಯಲ್ಲಿದೆ.

) ಅನ್ವೇಷಣೆ ಮುಂಗಿದು, ಅಂದಾಜು ಪಟ್ಟಿಯು ಮಂಜೂರಾದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಹಿಂದಿನ ಅನುದಾನ ಪಡೆಯುತ್ತಿದ್ದ ಪ್ರಾಥಮಿಕ ಶಾಲಾ ಶಿಕ್ಷಕರ ಉಪದಾನ ಹಣದ ಅಲ್ಪ ಭಾಗವನ್ನು ತಡೆಹಿಡಿದಿರುವ ಬಗ್ಗೆ

೫೬೯. ಶ್ರೀ ಎಂ. ರಾಮಪ್ಪ (ಬಳ್ಳಾರಿ).— ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಎ) ಬಳ್ಳಾರಿ ಜಿಲ್ಲೆಯಲ್ಲಿ ದಿನಾಂಕ:೧–೧–೬೯ರಲ್ಲಿ ಸರ್ಕಾರವು ತನ್ನ ವಶಕ್ಕೆ ತೆಗೆದುಕೊಂಡು ಹಿಂದಿನ ಅನುದಾನ ಪಡೆಯುತ್ತಿದ್ದ ಪ್ರಾಥಮಿಕ ಶಾಲಾ ಶಿಕ್ಷಕರ ಉಪದಾನ ಹಣದ ಅಲ್ಪ ಭಾಗವನ್ನು ಮಹಾಲೇಖಪಾಲಕರು ತಡೆಹಿಡಿದಿರುವ ಸಂಗತಿ ನಿಜವೇ ?

ಬಿ) ಸರ್ಕಾರಿ ಶಿಕ್ಷಕರಿಗೆ ನೀಡುತ್ತಿರುವ ಎಲ್ಲಾ ಸೌಲಭ್ಯಗಳನ್ನು ಸರಿಸಮಾನವಾಗಿ ಈ ಶಿಕ್ಷಕರಿಗೂ ವಿಸ್ತರಿಸದೆ ಇರುವುದು ನಿಜವೇ ?

ಸಿ) ಹೈದ್ರಾಬಾದ್ ವೇತನ ಶ್ರೇಣಿಯನ್ನು ದಿನಾಂಕ:೩೧–೧೨–೧೯೬೯ ರೊಳಗೆ ಸೇವೆಗೆ ಸೇರಿದ ಎಲ್ಲಾ ಶಿಕ್ಷಕರಿಗೂ ವಿಸ್ತರಿಸಿರುವುದು ನಿಜವೇ ಹಾಗಿದಲ್ಲಿ ದಿನಾಂಕ:೧–೧–೬೯ರಲ್ಲಿ ಹಿಂದಿನ ಅನುದಾನ ಪಡೆಯುತ್ತಿದ್ದ ಶಾಲಾ ಶಿಕ್ಷಕರ ಸೇವೆಯನ್ನು ಸರ್ಕಾರಿ ಶಾಲಾ ಶಿಕ್ಷಕರ ಸೇವೆಯೊಂದಿಗೆ ವಿಲೀನ ಗೊಳಿಸಿದ್ದು ಮಹಾಲೇಖಪಾಲಕರು ಅಂತವರ ಉಪದಾನದ ಹಣವನ್ನು ತಡೆಹಿಡಿಯಲು ಕಾರಣಗಳೇನು?

ಡಿ) ತಡೆಹಿಡಿದಿರುವ ಉಪಾದಾನದ ಹಣವನ್ನು ಬಿಡುಗಡೆಗೊಳಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ ?

ಶ್ರೀ ಡಿ. ಮಂಜನಾಥ್ (ಶಿಕ್ಷಣ ಮಂತ್ರಿಗಳು).—

ಎ) ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಬಿ) ಸರ್ಕಾರಿ ನೌಕರರಿಗೆ ನೀಡುವ ಎಲ್ಲಾ ಸೌಲಭ್ಯಗಳನ್ನು ಸರಿಸಮಂವಾಗಿ ಈ ಶಿಕ್ಷಕರಿಗೂ ವಿಸ್ತರಿಸಿದೆ.

ಸಿ) ಸರ್ಕಾರವು ಹೈದ್ರಾಬಾದ್ ವೇತನ ಶ್ರೇಣಿಯನ್ನು ದಿನಾಂಕ:೩೧–೧೨–೬೯ ರೊಳಗೆ ಸೇವೆಗೆ ಸೇರಿದ ಎಲ್ಲಾ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರಿಗೂ ವಿಸ್ತರಿಸಿದೆ. ಸರ್ಕಾರವು ತನ್ನ ವಶಕ್ಕೆ ತೆಗೆದು ಕೊಂಡ ಎಲ್ಲಾ ಹಿಂದಿನ ಅನುದಾನ ಶಾಲೆಗಳ ಸಿಬ್ಬಂದಿಯ ಹಿಂದಿನ ಸೇವೆಯನ್ನು ಆದೇಶ ಸಂಖ್ಯೆ: ಇಡಿ ೩೦ ಪಿಎಂಎಸ್ ೬೮, ದಿನಾಂಕ.೧೭–೧–೧೯೬೯ರಲ್ಲಿ ಸರ್ಕಾರಿ ನೌಕರರ ಸೇವೆಯಂತೆಯೇ ಪರಿಗಣಿಸಿದೆ. ಹಿಂದಿನ ಅನುದಾನ ಶಾಲಾ ಶಿಕ್ಷಕರ ಉಪದಾನದ ಹಣವನ್ನು ಮಹಾಲೇಖಪಾಲಕರು ತಡೆಹಿಡಿದಿರುವ ಅಂತವು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಡಿ) ಉದ್ಭವಿಸುವುದಿಲ್ಲ.

ಸೇತುವೆ ತೆರಿಗೆಯನ್ನು ವಸೂಲು ಮಾಡುವ ಬಗ್ಗೆ

೫೯೦. ಶ್ರೀ ಕೆ. ಜೆ. ಜಾರ್ಜ್ (ಭಾರತಿ ನಗರ).— ಮಾನ್ಯ ಲೋಕೋಪಯೋಗಿ, ಅಚ್ಚುಕಟ್ಟು ಅಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಎ) ಹೆದ್ದಾರಿಗಳ ಮೇಲಿನ ಸೇತುವೆಗೆ ತೆರಿಗೆಯನ್ನು ಎಂದಿನಿಂದ ವಸೂಲು ಮಾಡಲಾಗುತ್ತಿದೆ.

ಬಿ) ಇದು ವರೆವಿಗೂ ವಸೂಲಾಗಿರುವ ಹಣ ಎಷ್ಟು; (ಜಿಲ್ಲಾವಾರು ವಿವರಗಳನ್ನು ಕೊಡುವುದು)

ಸಿ) ಈ ತೆರಿಗೆಯಿಂದ ಸಾರ್ವಜನಿಕರಿಗೆ ಬಹಳ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?